ಕಾರಣನಾದವನು ಯಾರೆಂದು ಹೇಳುತ್ತಲೂ ಇಲ್ಲ. ಯಾರನ್ನಾದರೂ ರಕ್ಷಿಸುತ್ತಿದ್ದಾಳೋ ಅದೂ ತಿಳಿಯುತ್ತಿಲ್ಲ. ನನಗೆ ಏನು ಮಾಡಬೇಕೆಂದೇ ತೋಚುತ್ತಿಲ್ಲ, ನೀವೇ ನೋಡಿಕೊಳ್ಳಬೇಕು ಎಂದು ಸುಜಾತಾ ನನ್ನನ್ನು ಸಂಶಯದಿಂದ ನೋಡುತ್ತಾ ಹೇಳಿದರು.

ನನಗೆ ಚೈತ್ರಾಳ ಮೇಲೆ ಸಿಟ್ಟು, ಬೇಸರ ಎರಡೂ ಉಂಟಾಯಿತು. ಅವಳ ಅಜಾಗರೂಕತೆಯಿಂದ ತೊಂದರೆ ಆಗುತ್ತಿರುವುದು ನಮಗೆ. ಏನಾದರೂ ಮಾಡಿಕೊಳ್ಳಲಿ ಎಂದು ಬಿಟ್ಟುಬಿಡುವ ಹಾಗೂ ಇಲ್ಲ; ಅವಳಿಗೆ ತೊಂದರೆಯಾದರೆ, ಅಥವಾ ಅವಳೇ ಏನಾದರೂ ಮಾಡಿಕೊಂಡರೆ ಅಪವಾದ ತಪ್ಪಿದ್ದಲ್ಲ.

ಚೈತ್ರಾಳ ಪಕ್ಕ ಕೂತು 'ನೋಡು ಇದು ನಾವು ಪರಿಹರಿಸಬಹುದಾದ ವಿಷಯವಲ್ಲ. ನಿನ್ನ ತಂದೆ–ತಾಯಿಯ ಸಹಾಯ ಇಲ್ಲದೆ ಏನೂ ಮಾಡಲು ಆಗುವುದಿಲ್ಲ. ಅವರಿಗೆ ಬರಲು ಹೇಳು' ಎಂದು ಮನವರಿಕೆ ಮಾಡಲು ಯತ್ನಿಸಿದೆ. ಚೈತ್ರಾ ಬಿಲ್‌ಕುಲ್ ಒಪ್ಪಲಿಲ್ಲ. 'ಅವ್ವಂಗೆ ಗೊತ್ತಾದ್ರೆ ಸಹಿಸಂಗಿಲ್ಲ. ಜೀವ ಕಳ್ಕೊವಾಕೀನೆ' ಎಂದು ಖಡಾಖಂಡಿತವಾಗಿ ನಿರಾಕರಿಸಿದಳು. 'ತಂದೆ–ತಾಯಿಯನ್ನು ಕರೆಸಲು ಸಾಧ್ಯ ಇಲ್ಲ ಎಂದಾದರೆ ಕೊನೆ ಪಕ್ಷ ಕಾರಣನಾದವನು ಯಾರು ಎನ್ನುವುದಾದರೂ ತಿಳಿಯಬೇಕಲ್ಲ! ಅವನು ಯಾರೆಂದು ಗೊತ್ತಾದರೆ ಮುಂದೇನು ಮಾಡುವುದೆಂದು ನಿರ್ಧರಿಸಬಹುದು. ಅವನು ಯಾರೆಂದು ಹೇಳು, ಅವನಿಗೆ ತೊಂದರೆ ಕೊಡುವುದಿಲ್ಲ, ಕಂಪ್ಲೈಂಟ್ ಮಾಡುವುದಿಲ್ಲ. ಅವನು ಬಂದರೆ ಸಾಕು...', ಉಹುಂ ಎಷ್ಟೆಷ್ಟು ಪುಸಲಾಯಿಸಿದರೂ ಚೈತ್ರಾ ಬಾಯಿಬಿಡಲೇ ಇಲ್ಲ!

ನನಗೆ ರೋಸಿ ಹೋಯಿತು. ಆಸ್ಪತ್ರೆಯಿಂದ ಬಿಡುಗಡೆ ಮಾಡಿಸುತ್ತೇವೆ, ಏನಾದರೂ ಮಾಡಿಕೋ ಎನ್ನುವಷ್ಟು ಸಿಟ್ಟು ಬಂತು. ನನಗೆ ಸಿಟ್ಟು ಬಂದಿದ್ದು ಅರಿವಾಗಿ ಅವಳ ಮುಖ ಬಾಡಿತು. ಏನು ಮಾಡಬೇಕೆಂದು ತೋಚದೆ ನಿಂತ ನನ್ನನ್ನು ಸುಜಾತಾ ಸಮಾಧಾನ ಪಡಿಸಿದರು. 'ಅವಳೇನಾದರೂ ಮಾಡಿ ಕೊಂಡರೆ ಕಷ್ಟ, ಡಾಕ್ಟರ್ ಒಪಿನಿಯನ್ ಕೇಳೋಣ' ಎಂದರು.

ಸಮಯ ಕಾದು ಡಾಕ್ಟರನ್ನು ಭೇಟಿಯಾದೆವು. 'ಪೇಷಂಟಿಗೆ ನೀವೇನಾಗಬೇಕು?' ಡಾಕ್ಟರ್ ವಿಚಾರಿಸಿದರು. ಸುಜಾತಾ ನಾವು ಸಹೋದ್ಯೋಗಿಗಳೆಂದು ಪರಿಚಯಿಸಿ, ಬೆಂಗಳೂರಲ್ಲಿ ಆಕೆ ಒಬ್ಬಳೇ ಇರುವುದನ್ನು ತಿಳಿಸಿದರು. ನಾನು ಚೈತ್ರಾಳ ಕುರಿತು ನನಗೆ ತಿಳಿದಿರುವುದನ್ನು ಹೇಳಿ ಅವಳ ಸ್ಥಿತಿಯ ಬಗ್ಗೆ ವಿಚಾರಿಸಿದೆ. ಡಾಕ್ಟರ್ ನಮ್ಮ ಮಾತುಗಳನ್ನು ಕೇಳಿಸಿಕೊಂಡು, 'ಇದು ಸಹಜವಾದ ಬ್ಲೀಡಿಂಗ್ ಅಲ್ಲ, ಗರ್ಭಪಾತಕ್ಕೆ ಅವಳು ಏನೇನೋ ಮಾತ್ರೆಗಳನ್ನು ತೆಗೆದುಕೊಂಡಿದ್ದಾಳೆ, ಬೇರೆ ಬೇರೆ ರೀತಿಯಲ್ಲಿ ಪ್ರಯತ್ನವನ್ನೂ ಮಾಡಿರುತ್ತಾಳೆ' ಎಂದರು.

ನಾನು ಅವಳು ಪ್ರೆಗ್ನೆನ್ಸಿ ಟರ್ಮಿನೇಟ್ ಮಾಡಲು ಹಟ ಹಿಡಿಯುತ್ತಿರುವುದನ್ನು ತಿಳಿಸಿ ಏನು ಮಾಡಲು ಸಾಧ್ಯ ಎಂದು ಪ್ರಶ್ನಿಸಿದೆ. 'ಅವಳಿಗೀಗ ಎರಡನೇ ಟ್ರೈಮೆಸ್ಟರ್ ನಡೆಯುತ್ತಿದೆ ಅಬಾರ್ಷನ್ ಮಾಡುವುದರಲ್ಲಿ ತಪ್ಪಿಲ್ಲ. ಆದರೆ, ದಿನಗಳೆದಂತೆ ರಿಸ್ಕ್ ಜಾಸ್ತಿ, ಆದಷ್ಟು ಬೇಗ ಡಿಸಿಷನ್ ತೆಗೆದುಕೊಳ್ಳಬೇಕು. ಅವಳ ಪರವಾಗಿ ಯಾರಾದರೂ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ' ಡಾಕ್ಟರ್ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ನಮಗೆ ದಿಕ್ಕು ತೋಚದಂತಾಯಿತು. ಡಾಕ್ಟರ್ ಹೇಳಿದ ಪ್ರಕಾರ ಜವಾಬ್ದಾರಿ ತೆಗೆದುಕೊಳ್ಳುವವರು ಯಾರು? ಏನಾದರು ಹೆಚ್ಚು ಕಮ್ಮಿಯಾದರೆ ಗತಿ ಏನು? ಇದು ಸುಲಭದಲ್ಲಿ ಬಗೆಹರಿಯುವಂತೆ ಕಾಣಲಿಲ್ಲ. ಕೆಲವೊಮ್ಮೆ ಕ್ಲಿಷ್ಟ ವಿಷಯಗಳಲ್ಲಿ ಹೆಣ್ಣು ಮಕ್ಕಳಿಗೆ ಮಿಂಚಿನಂತೆ ಪರಿಹಾರ ಹೊಳೆದು ಬಿಡುತ್ತದೆ. ಈ ಸಂದರ್ಭದಲ್ಲೂ ಹಾಗೇ ಆಯಿತು. ಸುಜಾತಾ 'ನಾವು ಎಷ್ಟು ಯೋಚನೆ ಮಾಡಿದರೂ ಅಷ್ಟೇ, ಅದರಿಂದ ಏನೂ ಉಪಯೋಗವಿಲ್ಲ. ರಕ್ತ ಸ್ರಾವ ಆಗಿದ್ದು ನಮ್ಮ ಕಚೇರಿಯಲ್ಲಿ. ಆದ್ದರಿಂದ ನಾವಿದನ್ನು ಮ್ಯಾನೇಜ್‌ಮೆಂಟ್ ಗಮನಕ್ಕೆ ತರಲೇ ಬೇಕಾಗುತ್ತದೆ. ನೀವು ಸಂಬಂಧಪಟ್ಟವರಿಗೆ ತಿಳಿಸಿ ಬಿಡಿ. ಅವರೇನು ನಿರ್ಧಾರ ತೆಗೆದುಕೊಳ್ಳುತ್ತಾರೋ ಹಾಗೇ ಮಾಡೋಣ' ಎಂದರು. ನನಗೂ ಇದೇ ಸರಿ ಅನ್ನಿಸಿತು. ಆದರೆ, ಸುಜಾತಾ ಜನರಲ್ ಮ್ಯಾನೇಜರ್ ಜೊತೆ ಮಾತನಾಡಲು ಒಪ್ಪದೆ, ಇದು ಇರುಸು ಮುರುಸಿನ ವಿಚಾರ, ನೀವೇ ಮಾತಾಡಿ ಎಂದರು. ನನಗೂ ಜಿ.ಎಂ ಹತ್ತಿರ ಚರ್ಚಿಸುವುದು ಹಿತದ